13. ನವಣೆ – ಮಳೆಯಾಶ್ರಿತ

ಇದು ಒಂದು ಸತ್ವಯುತ ಕಿರುಧಾನ್ಯ ಹಾಗೂ ಅಲ್ಪಾವಧಿ ಸಿರಿ ಧಾನ್ಯದ ಬೆಳೆ. ಮಳೆಯಾಶ್ರಿತ ಪ್ರದೇಶಗಳಲ್ಲಿ ಸುಲಭವಾಗಿ ಬೆಳೆಯಬಹುದು. ಕಡಿಮೆ ಫಲವತ್ತಾದ ಭೂಮಿಯಲ್ಲೂ ಬೆಳೆಯಬಹುದಲ್ಲದೇ ಗುಡ್ಡಗಾಡು ಪ್ರದೇಶಗಳಲ್ಲಿಯೂ ಸಹ ಬೆಳೆಯಬಹುದು. ಅತಿ ಕಡಿಮೆ ತೇವಾಂಶದಲ್ಲಿಯೂ ಬೆಳೆಯುವುದರಿಂದ ಬರಗಾಲದಂತಹ ಪರಿಸ್ಥಿತಿಗೂ ಸೂಕ್ತವಾದ ಬೆಳೆಯಾಗಿದೆ. ನವಣೆ ಮೇವು ಹೆಚ್ಚು ಪೋಷಕಾಂಶಗಳನ್ನು ಹೊಂದಿದ್ದು, ಜಾನುವಾರುಗಳ ಮೇವಿಗೂ ಉಪಯೋಗಿಸಬಹುದು.

ತಳಿಗಳು ಮತ್ತು ವಿಶೇಷ ಗುಣಗಳು

ತಳಿಗಳು	ಬಿತ್ತನೆ ಕಾಲ	ಕಾಲಾವಧಿ (ದಿನಗಳು)	ಇಳುವರಿ (ಕ್ವಿಂ / ಎ)	ವಿಶೇಷ ಗುಣಗಳು
ಪಿ.ಎಸ್ 4	ಜೂನ್–ಆಗಸ್ಟ್	80–85	ಧಾನ್ಯ: 4–6 ಮೇವು: 0.5–1.0 ಟನ್	ಹೆಚ್ಚಿನ ತೆಂಡೆಗಳನ್ನು ಹೊಂದಿದ್ದು, ಅಧಿಕ ಧಾನ್ಯದ ಇಳುವರಿಯನ್ನು ಕೊಡುತ್ತದೆ.
ಎಸ್.ಐ.ಎ 326	ಮೇ–ಆಗಸ್ಟ್	85–90		ಬರ ಸಹಿಷ್ಣುತೆ ಗುಣ ಹೊಂದಿದೆ. ತೆಳುವಾದ ಕಾಂಡ ಹೊಂದಿದ್ದು, ತೆನೆಯಲ್ಲಿ ದಟ್ಟವಾಗಿ ಕಾಳುಗಳು ಕಟ್ಟಿರುತ್ತವೆ ಹಾಗು ಹೆಚ್ಚು ಪ್ರೋಟೀನ್ ಅಂಶ ಹೊಂದಿದೆ.

ಬೇಸಾಯಕ್ಕೆ ಬೇಕಾಗುವ ಸಾಮಗ್ರಿಗಳು (ಎಕರೆಗೆ)

ಸಾಮಗ್ರಿಗಳು	*ಪ್ರಮಾಣ*
ಬಿತ್ತನೆ ಬೀಜ (ಕಿ.ಗ್ರಾಂ)	3–4
ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟ್ (ಟನ್)	2.5
ರಸಾಯನಿಕ ಗೊಬ್ಬರಗಳು (ಕಿ.ಗ್ರಾಂ)	
ಸಾರಜನಕ	16
ರಂಜಕ	16

ಬಿತ್ತನೆ ಮತ್ತು ಬೇಸಾಯ:

- ಬಿತ್ತನೆಗೆ 3–4 ವಾರಗಳ ಮುಂಚೆ ಕೊಟ್ಟಿಗೆ ಗೊಬ್ಬರವನ್ನು ಮಣ್ಣಿನಲ್ಲಿ ಸೇರಿಸುವುದು.
- ಶಿಫಾರಸ್ಸು ಮಾಡಿದ ರಸಗೊಬ್ಬರಗಳಾದ ಸಾರಜನಕ ಮತ್ತು ರಂಜಕವನ್ನು ಬಿತ್ತನೆ ಸಮಯದಲ್ಲಿ ಕೊಡುವುದು.
- ಬಿತ್ತನೆ ಬೀಜವನ್ನು ಸಾಲಿನಿಂದ ಸಾಲಿಗೆ 12 ಅಂಗುಲ, ಗಿಡದಿಂದ ಗಿಡಕ್ಕೆ 4 ಅಂಗುಲ ಅಂತರದ ಸಾಲುಗಳಲ್ಲಿ 2 ಅಂಗುಲಕ್ಕಿಂತ ಹೆಚ್ಚು ಆಳವಿಲ್ಲದಂತೆ ಬಿತ್ತುವುದು.
- ಬೀಜವನ್ನು ಗೊಬ್ಬರ ಮತ್ತು ಬಿತ್ತನೆ ಬೀಜವನ್ನು ಒಟ್ಟಿಗೆ ಬಿತ್ತುವ ಸಂಯುಕ್ತ ಕೂರಿಗೆಯಿಂದ ಬಿತ್ತುವುದು.
- ಕಳೆ ನಿರ್ವಹಣೆಗೆ 2–3 ಬಾರಿ ಅಂತರ ಬೇಸಾಯ ಮಾಡುವುದರ ಜೊತೆಗೆ ಒಂದು ಬಾರಿ ಕೈಯಿಂದ ಕಳೆ ತೆಗೆಯುವುದು.
- ಜೂನ್–ಜುಲೈ ತಿಂಗಳಿನಲ್ಲಿ ಬಿತ್ತನೆ ಮಾಡುವ ನವಣೆ ಜೊತೆಯಲ್ಲಿ ತೊಗರಿ (4–5:1), ಆಗಸ್ಟ್ ತಿಂಗಳಲ್ಲಿ ನವಣೆ ಜೊತೆಯಲ್ಲಿ ಹುರುಳಿ (4–5:1) ಬಿತ್ತುವುದು. ಎಕರೆಗೆ 2 ಕಿ.ಗ್ರಾಂ. ತೊಗರಿ ಅಥವಾ 4 ಕಿ.ಗ್ರಾಂ. ಹುರುಳಿ ಬಿತ್ತನೆ ಬೀಜ ಬೇಕಾಗುತ್ತದೆ. ನವಣೆ ಇಳುವರಿಯಲ್ಲಿ ಯಾವುದೇ ಪರಿಣಾಮಗಳಾಗದೆ ಸರಾಸರಿ 1.5–2 ಕ್ವಿಂಟಾಲ್ ತೊಗರಿ ಅಥವಾ 0.75–1 ಕ್ವಿಂಟಾಲ್ ಹುರುಳಿಯನ್ನು ಪಡೆಯಬಹುದಾಗಿದೆ.

ಸಸ್ಯ ಸಂರಕ್ಷಣೆ: ಕೀಟ ಮತ್ತು ರೋಗಗಳ ಬಾಧೆ ಅಷ್ಟಾಗಿ ಕಂಡು ಬಂದಿರುವುದಿಲ್ಲ, ಆದುದರಿಂದ ಸಸ್ಯ ಸಂರಕ್ಷಣೆ ಅವಶ್ಯಕತೆವಿರುವುದಿಲ್ಲ.

ಮುಖ್ಯವಾದ ಕಡಿಮೆ ಖರ್ಚಿನ ಬೇಸಾಯ ಕ್ರಮಗಳು

- ಜೂನ್ ಕೊನೆಯೊಳಗಾಗಿ ಬಿತ್ತನೆ ಮಾಡುವುದು.
- 2 ಅಂಗುಲಕ್ಕಿಂತ ಹೆಚ್ಚು ಆಳದಲ್ಲಿ ಬಿತ್ತನೆ ಮಾಡಬಾರದು.